# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಎಂ. ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 182 |
| ಉತ್ತರಿಸಬೇಕಾದ ದಿನಾಂಕ | 13.09.2022 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯ ಮಾಲೂರು ಮತ್ತು ಬಂಗಾರ ಪೇಟೆ ನಗರ ಮಾರ್ಗ ಮಧ್ಯೆ ಬರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಗೆ ಮಂಜೂರಾದ ಒಟ್ಟು ಮೊತ್ತ ಎಷ್ಟು ಇದುವರೆಗೂ ಖರ್ಚು ಮಾಡಿರುವ ಮೊತ್ತ ಎಷ್ಟು; | ಕೋಲಾರ ಜಿಲ್ಲೆಯ ಮಾಲೂರು ಮತ್ತು ಬಂಗಾರಪೇಟೆ ನಗರ ಮಾರ್ಗ ಮಧ್ಯೆ ಬರುವ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಎರಡು ಹಂತದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;<br>1) ಸರ್ಕಾರದ ಆದೇಶ ಸಂಖ್ಯೆ ನಅಇ 26 ಯುಡಬ್ಲ್ಯೂಎಸ್ 2006, ದಿನಾಂಕ 22.08.2007 ರಲ್ಲಿ ಯರಗೋಳು ಜಲಾಶಯ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.160.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>ಸದರಿ ಅನುದಾನದಲ್ಲಿ ಇದುವರೆಗೂ ಖರ್ಚಾದ ಮೊತ್ತ ರೂ.159.98 ಕೋಟಿಗಳು.<br>2) ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿ ಏರುಕೊಳವೆ ಮಾರ್ಗ, ವಿತರಣಾ ಕೊಳವೆ ಮಾರ್ಗ, ಮೇಲ್ಮಟ್ಟದ ಜಲಸಂಗ್ರಹಾಗಾರಗಳು, ಶುದ್ಧೀಕರಣ ಘಟಕಗಳು, ಪಂಪಿಂಗ್ ಮೆಶಿನರಿ, 11 ಕೆ.ವಿ ನಿರಂತರ ವಿದ್ಯುತ್ ಸರಬರಾಜು ಕಾಮಗಾರಿ ಹಾಗೂ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ ನಅಇ 23 ಪಿಆರ್‌ಜೆ 2019, ದಿನಾಂಕ 16.01.2021 ರಲ್ಲಿ ರೂ.127.76 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>ಸದರಿ ಅನುದಾನದಲ್ಲಿ ಇದುವರೆಗೂ ರೂ.92.26 ಕೋಟಿಗಳು ಖರ್ಚಾಗಿರುತ್ತದೆ. |

| | | |
|---|---|---|
| ಆ) | ಏರಗೊಳ ಡ್ಯಾಂಗೆ ಮಾಲೂರು ತಾಲ್ಲೂಕಿನ ಮಾರ್ಕಂಡಯ್ಯ ಡ್ಯಾಂನಿಂದ ನೀರು ಬರುತ್ತಿದೆಯೇ; ಹೌದಾದಲ್ಲಿ, ಮಾರ್ಕಂಡಯ್ಯ ಡ್ಯಾಂಗೆ ಕೆ.ಸಿ ವ್ಯಾಲಿನ್ ನೀರು ಬರುತ್ತದಯೇ; ಇಲ್ಲದಿದ್ದಲ್ಲಿ, ಕಾರಣವೇನು; | ಯರಗೊಳು ಡ್ಯಾಂಗೆ ಮಾಲೂರು ತಾಲ್ಲೂಕಿನ ಮಾರ್ಕಾಂಡೇಯ ಡ್ಯಾಂ (ಬೂದಿಕೋಟೆ ಸಮೀಪದಲ್ಲಿರುವ ಮಾರ್ಕಾಂಡೇಯ ಕೆರೆ) ನಿಂದ ನೀರು ಕೋಡಿ ಬಿದ್ದಾಗ ಹರಿದು ಬರುತ್ತಿರುತ್ತದೆ. ಯರಗೊಳು ಅಣೆಕಟ್ಟೆಗೆ ಒಟ್ಟು ಮಾರ್ಕಾಂಡೇಯ catchment ಹೊರತುಪಡಿಸಿ 101.165 Sq.km catchment ಪ್ರದೇಶದಲ್ಲಿ ಸಂಗ್ರಹವಾಗುವ ಮಳೆಯ ನೀರು ಹರಿದು ಬಂದು ಸಂಗ್ರಹವಾಗುತ್ತದೆ. ಮಾರ್ಕಾಂಡೇಯ ಕೆರೆಯ ಮೇಲ್ಭಾಗದಲ್ಲಿರುವ (Upstream tanks) ಕೆರೆಗಳಿಗೆ ಬೆಂಗಳೂರು ನಗರದ ಸಂಸ್ಕರಿಸಿದ ತ್ಯಾಜ್ಯ ನೀರನ್ನು (Secondary treated effluent) ಹರಿಸುವ ಕೆ.ಸಿ ವ್ಯಾಲಿ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗಿರುತ್ತದೆ. |
| ಇ) | ಈ ಯೋಜನೆಯಿಂದ ಸದರಿ 3 ನಗರ ಮತ್ತು ಹಳ್ಳಿಗಳಿಗೆ ಎಂದಿನಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು. | ಯರಗೋಳ ಯೋಜನೆಯಿಂದ ಬಂಗಾರಪೇಟೆ ಪಟ್ಟಣ, ಮಾಲೂರು ಪಟ್ಟಣ ಮತ್ತು ಕೋಲಾರ ನಗರಕ್ಕೆ ಫೆಬ್ರವರಿ-2023 ರ ಅಂತ್ಯಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿದೆ. ಯರಗೋಳದಿಂದ ಬಂಗಾರಪೇಟೆ ಪಟ್ಟಣದವರೆಗೆ, ಬಂಗಾರಪೇಟೆ ಪಟ್ಟಣದಿಂದ ಮಾಲೂರು ಪಟ್ಟಣ ಮತ್ತು ಕೋಲಾರ ನಗರದ ಮಾರ್ಗ ಮಧ್ಯದಲ್ಲಿರುವ 45 ಹಳ್ಳಿಗಳಿಗೆ ಏರು ಕೊಳವೆಯಿಂದ Tapping points ಕಲ್ಪಿಸಲಾಗುತ್ತಿದೆ. Tapping points ಗಳಿಂದ ಹಳ್ಳಿಗಳಿಗೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು RWSSD ಇಲಾಖೆಯಿಂದ ಕೈಗೊಳ್ಳಬೇಕಾಗಿರುತ್ತದೆ. |

ಸಂಖ್ಯೆ : ನಅಇ 131 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**